ಒ ಎಸ್ ನಂಃ **137/2019** ಪಿ.ಡಬ್ಲ್ಯುಃ **1**

ದಿನಾಂಕಃ 20-08-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ-

ನಾನು ವಿದ್ಯಾಭ್ಯಾಸ ಮಾಡಿಲ್ಲ. ನಂಜಯ್ಯ ನನ್ನ ತಂದೆ. ಕಮಲಾದೇವಿ ಅಂದರೆ ವಾದಿ 2 ಮತ್ತು 3 ನೇ ವಾದಿ ನನ್ನ ಸಹೋದರಿಯರಾಗಿದ್ದಾರೆ. ನನ್ನ ತಾಯಿ ಹೆಸರು ಲಕ್ಷ್ಮಮ್ಮ ಆಗಿರುತ್ತದೆ. ಪ್ರತಿವಾದಿ 1 ನನ್ನ ಸಹೋದರನಾಗಿದ್ದಾರೆ. ನಮ್ಮ ತಂದೆಗೆ 4 ಜನ ಪತ್ನಿಯರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದೇವಮ್ಮ, ಲಕ್ಷಮ್ಮ ಎಂಬ ಇಬ್ಬರು ಪತ್ನಿಯರಿದ್ದರೆನ್ನುತ್ತಾರೆ. ದೇವಮ್ಮ ಮೊದಲನೇ ಪತ್ನಿ, ಲಕ್ಷ್ಮಮ್ಮ 2 ನೇ ಪತ್ನಿಯಾಗಿದ್ದಾರೆ. ನಾನು ಲಕ್ಷಮ್ಮನ ಮಗಳಾಗಿದ್ದೇನೆ. ಮಂಜುನಾಥ ನನ್ನ ಸ್ವಂತ ಸಹೋದರ ಅಂದರೆ ಲಕ್ಷ್ಮಮ್ಮನ ಮಗನಾಗಿದ್ದಾರೆ. ದೇವಮ್ಮನಿಗೆ ಇಬ್ಬರು ಮಕ್ಕಳು. ಅವರೆಂದರೆ ನಂಜಮ್ಮ ಹಾಗೂ ಕಾವೇರಮ್ಮ ಆಗಿರುತ್ತಾರೆ. ಅವರನ್ನು ಪಕ್ಷಗಾರರನ್ನಾಗಿ ಈ ಪ್ರಕರಣದಲ್ಲಿ ತಂದಿರುವುದಿಲ್ಲ. ವಾದಿ 2 ಮತ್ತು 3 ರವರು ನನ್ನ ಸ್ವಂತ ಸಹೋದರಿಯರಾಗಿದ್ದಾರೆ. ದೇವಮ್ಮ ಬದುಕಿದ್ದಾರೆ. ನನ್ನ ತಾಯಿ ಲಕ್ಷ್ಮಮ್ಮ ಬದುಕಿರುವುದಿಲ್ಲ.

ಸ.ನಂ.49/1, 49/2, 49/3 ರಲ್ಲಿ ಎಷ್ಟು ಎಷ್ಟು ವಿಸ್ತೀರ್ಣ ಇರುತ್ತದೆಂದು ಗೊತ್ತಿಲ್ಲ. ದಾವಾಆಸ್ತಿ ನಮ್ಮ ತಂದೆ ನಂಜಯ್ಯ ನವರಿಗೆ ಸೇರಿತ್ತು. ಅವರು ಸೈನಿಕರಾಗಿದ್ದರಿಂದ ಸರ್ಕಾರದಿಂದ ಅವರಿಗೆ ಮಂಜೂರಾಗಿತ್ತು. ನನ್ನ ತಾಯಿ ಲಕ್ಷ್ಮಮ್ಮ, ನನ್ನ ಚಿಕ್ಕತಾಯಿ ದೇವಮ್ಮ, ಸಹೋದರ ಮಂಜುನಾಥ ರವರು ದಾವಾಅಸ್ತಿಯನ್ನು 1989 ರಲ್ಲಿ ಮಾರಾಟ ಮಾಡಿದ್ದಾರೆಂದರೆ ಗೊತ್ತಿಲ್ಲ. ನೀವೇ ನಿಪಿ38 ರಂತೆ ಸದರಿ ದಾಖಲೆ ಕೊಟ್ಟಿದ್ದೀರೆಂದರೆ ಸಾಕ್ಷಿ ನನಗೆ ಓದು ಬರಹ ಇಲ್ಲದ ಕಾರಣ ಅದರ ಬಗ್ಗೆ ಗೊತ್ತಿಲ್ಲ ಅನ್ನುತ್ತಾರೆ. ದಾಖಲೆಗಳನ್ನು ನನ್ನ ಸಹೋದರ ಮಂಜುನಾಥ ನನಗೆ ತೆಗೆಸಿ ಕೊಟ್ಟಿದ್ದಾರೆ. ನಾನು ಹಾಗೂ ಸಹೋದರ ಮಂಜುನಾಥ ನ್ಯಾಯಾಲಯಕ್ಕೆ ಬರುತ್ತೇವೆ ಎಂದರೆ ಸರಿ. ಒಟ್ಟಿಗೆ ಹೋಗುತ್ತೇವೆಂದರೆ ಸರಿ. ದಾವೆ ದಾಖಲು ಮಾಡಲು ನನ್ನ ಸಹೋದರನೇ ಹೇಳಿದ್ದಾರೆಂದರೆ ಸರಿಯಲ್ಲ. ನನ್ನ ಸಹೋದರ, ನನ್ನ ತಾಯಿ, ಚಿಕ್ಕ ತಾಯಿ ಮೋಸ ಮಾಡಿ ಮತ್ತು ಮೋಸ ಮಾಡಿ ದಾಖಲೆ ಬರೆಸಿಕೊಂಡಿದ್ದಾರೆಂದು ದಾವೆ ಮಾಡಿದ್ದೇನೆಂದರೆ ಸರಿಯಲ್ಲ. ನಾನು ಈ ಬಗ್ಗೆ ಯಾವುದೇ ದೂರು ನೀಡಿರುವುದಿಲ್ಲ.

ದೇವಮ್ಮ ನವರು ಅಸಲು ದಾವಾ ಸಂಃ 16/03 ರಂತೆ ವಿಭಾಗದ ಪ್ರಕರಣ ಮಾಡಿದ್ದರು ಎಂದರೆ ಸರಿ. ನಾನೂ ಕೂಡಾ ಸದರಿ ಪ್ರಕರಣದಲ್ಲಿ ಪಕ್ಷಗಾರಳಾಗಿದ್ದೆ ಎಂದರೆ ಸರಿ. ವಕೀಲರ ಮುಖಾಂತರ ನೀವು ತಕರಾರು ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಏನು ಮಾಡಿದ್ದರೆಂದು ಗೊತ್ತಿಲ್ಲ ಅನ್ನುತ್ತಾರೆ. ನಾನು ಆ ಪ್ರಕರಣದಲ್ಲಿ ಹೋಗುತ್ತಾ ಬರುತ್ತಾ ಇದ್ದೆ ಎಂದರೆ ಸರಿಯಲ್ಲ. 2018 ರಲ್ಲಿ ಪ್ರತಿವಾದಿ 2 ರವರು ದಾವಾಆಸ್ತಿ ಖರೀದಿ ಮಾಡಿರುವ ವಿಚಾರ ಗೊತ್ತಾಗಿರುತ್ತದೆ. ಎಫ್ ಡಿ ಪಿ ನಂಃ15/13 ರ ಪ್ರಕರಣದಲ್ಲಿ 2 ನೇ ಎದುರುದಾರರು ಪಕ್ಷಗಾರರಾಗಲು ಅರ್ಜಿ ಸಲ್ಲಿಸಿದ್ದರೆಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಎದುರುದಾರರ ಆಸ್ತಿ ಲಪಟಾಯಿಸುವ ದುರುದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ತಹಶೀಲ್ದಾರ್ ರವರಿಗೆ ನೀಡಿರುವ ನೋಟೀಸಿನಲ್ಲಿ ಎಲ್ಲಾ ವಿಚಾರ ಹೇಳಿದ್ದೇನೆಂದರೆ ಸಾಕ್ಷಿ ಗೊತ್ತಿಲ್ಲ ಅನ್ನುತ್ತಾರೆ. ಸಾಕ್ಷಿ ನನ್ನ ತಮ್ಮ ಕೊಟ್ಟಿದ್ದಾರೆನ್ನುತ್ತಾರೆ. ಪಿ ಟಿ ಸಿ ಎಲ್ ಎಸ್ ಸಿ ಎಸ್ ಟಿ ನಂಃ1/2019-20 ರಂತೆ ನಾವು ದಾವಾಆಸ್ತಿಗೆ ಪ್ರಕರಣ ದಾಖಲು ಮಾಡಿದ್ದೇವೆಂದರೆ ಸರಿಯಲ್ಲ. ಸದರಿ ಪ್ರಕರಣ ಬಾಕಿ ಇದೆ ಎಂದರೆ ಸರಿಯಲ್ಲ. ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯೇ ದಾವಾಅಸ್ತಿಯ ಸ್ವಾಧೀನತೆಯಲ್ಲಿ ಇದ್ದಾರೆಂದರೆ ಸರಿ. ಕುರಿ ಸಾಕಾಣಿಕೆ ಹಾಗೂ ಅಡಿಕೆ ತೋಟ ಮಾಡಿದ್ದಾರೆಂದರೆ ಸರಿ. ಪ್ರತಿವಾದಿ ಎಷ್ಟು ವರ್ಷಗಳಿಂದ ಸ್ವಾಧೀನತೆಯಲ್ಲಿ ಇದ್ದಾರೆಂದು ಗೊತ್ತಿಲ್ಲ. ಆರ್ ಟಿ ಸಿ ಅವರ ಹೆಸರಿಗೆ ಯಾವಾಗ ಬದಲಾಗಿದೆ ಅಂತ ಗೊತ್ತಿಲ್ಲ. 10 ವರ್ಷದ ಅಡಿಕೆ ಗಿಡ ದಾವಾಅಸ್ತಿಯಲ್ಲಿ ಇರುತ್ತದೆ. ದಾವಾಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಮಾಡಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇ ಎ ಒ

**Sd/-**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.